ಹೋಗಿಬಂದಿದ್ದೇನೆ. ಆಮೇಲೆ ಅಲ್ಲಿಯ ಕಾಂಟ್ರಾಕ್ಟರ್‌ಗಳು ಯಾರು ಎಂದರೆ, ಒಬ್ಬ ಟೀಚರ್‌ಗೆ, ಒಬ್ಬ ವಿಲೇಜ್ ಅಕೌಂಟೆಂಟ್ ಆಮೇಲೆ ರಿಟೈರ್ಡ್ ಇಂಜಿನಿಯರ್ಸ್ ಇಂತಹವರಿಗೆ ಕೊಟ್ಟಿದ್ದಾರೆ, ಒಬ್ಬರೂ ಕ್ವಾಲಿಫೈಡ್ ಇಲ್ಲ, ಅವರಿಗೊಂದು ಮೆಷನರೀಸ್ ಇಲ್ಲ, ಏನೂ ಇಲ್ಲ ಇವರು ಎಲ್.ಓ.ಸಿ.ಯನ್ನೂ ಕೂಡ ಬಿಡುಗಡೆ ಮಾಡಿಲ್ಲ, ಕಳೆದ ಬಾರಿ ಇಲ್ಲಿ ಗಲಾಟೆ ಆದಮೇಲೆ 8 ಕೋಟಿ ರೂಪಾಯಿ ಕೊಟ್ಟಿದ್ದೇವೆನ್ನುತ್ತಾರೆ, ಆದೂ ಮುಟ್ಟಿಲ್ಲ ಹೀಗಾಗಿ ಕೆಲಸ ಹೇಗಾಗುತ್ತದೆ ಅಧ್ಯಕ್ಷರೇ? ಬೇಕಾದರೆ ನೀವು ಹೋಗಿ ನೋಡಿಕೊಂಡು ಬನ್ನಿ.

ಶ್ರೀ ಕೆ. ಎನ್. ನಾಗೇಗೌಡ :- ಒಂದು ನಿಮಿಷ ತಾವು ಕುಳಿತುಕೊಳ್ಳಿ, ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದರಲ್ಲಿ 8 ಕೋಟಿ ಎಲ್.ಓ.ಸಿ. ಕೊಟ್ಟಿಲ್ಲ ಎಂದೂ ಪ್ರಸ್ತಾಪ ಮಾಡಿದರು. ಎಲ್.ಓ.ಸಿಯನ್ನು ಈಗಾಗಲೇ ಕಳುಹಿಸಿ ಕೊಟ್ಟಿದ್ದೇವೆ, ಅದು ಮುಟ್ಟದೇ ಇದ್ದರೆ ನಾನು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಇಲ್ಲಿ ಹಣಕಾಸಿನ ಸಚಿವರೂ ಕೂಡ ಇದ್ದಾರೆ, ತಮಗೆ ಹೇಳುವುದಾದರೆ ಇದು 19 ಕೋಟಿ ರೂಪಾಯಿಯ ಕೆಲಸ ಆದು. ಎಲ್ಲಾ ವೇರಿಯಸ್ ಸ್ಟೇಜ್‌ನಲ್ಲಿ ಕೆಲಸ ಆಗಬೇಕಾಗಿದೆ. ನಿಜವಾಗಿಯೂ ಹೇಳುವುದಾದರೆ ಒಂದೂವರೆ ಕೋಟಿ ರೂಪಾಯಿ ಮಾತ್ರ ಬಿಡುಗಡೆಯಾಗಿತ್ತು. ಈ ಎರಡು ತಿಂಗಳಿನಲ್ಲಿ ನಾವು 8 ಕೋಟಿ ಬಿಟ್ಟು 91/2 ಕೋಟಿ ಬಿಡುಗಡೆ ಮಾಡಿದ್ದೇವೆ. ಹಣಕಾಸಿನ ತೊಂದರೆ ಇಲ್ಲ. ಅಲ್ಲಿರತಕ್ಕಂಥ ತೊಂದರೆ ಟೆಕ್ನಿಕಲ್ ಆಗಿ ಅವರು ಹೇಳಿದರು ಯಾರುಯಾರು ಕಂಟ್ರಾಕ್ಟ್ ಮಾಡುತ್ತಿದ್ದಾರೆ ಅರ್ಹರಲ್ಲದ ಕಂಟ್ರಾಕ್ಟರ್ಸ್ ಇದ್ದಾರೆ ಎಂದು ಹೇಳಿದ್ದಾರೆ. ಆ ರೀತಿ ಅರ್ಹರಲ್ಲದ ಗುತ್ತಿಗೆದಾರರು ಇದ್ದರೆ I will hold the Chief Engineer responsible ನಾನು ಪುನಃ ಅಲ್ಲಿಗೆ ಕ್ವಾಲಿಟಿ ಕಂಟ್ರೋಲರನ್ನು ಕಳುಹಿಸಿಕೊಟ್ಟಿದ್ದೇನೆ, ಅವರೂ ಹೋಗಿ ನೋಡಿಕೊಂಡು ಬಂದಿದ್ದಾರೆ, ಸಹಜವಾಗಿ ಅವರು ಹೋಗಿದ್ದ ದಿವಸ ಇದ್ದಂಥ ಪರಿಸ್ಥಿತಿಗೂ ಇವೊತ್ತು ಇರತಕ್ಕಂಥ ಪರಿಸ್ಥಿತಿಗೂ ಖಿರ್ಗಿಯವರೇ ಬಹಳ ವ್ಯತ್ಯಾಸ ಇದೆ, ನೀವು ಹೋಗಿ ನೋಡಿ, ಬೇಕಾದರೆ ನನ್ನ ಜೊತೆಯಲ್ಲೇ ಬನ್ನಿ ಅಧಿವೇಶನ ಮುಗಿದ ತಕ್ಷಣವೇ ಹೋಗೋಣ. ನಾನು ಹೋಗಿಲ್ಲ ಎಂದು ಒಪ್ಪಿಕೊಂಡಿದ್ದೇನಲ್ಲ, ನೀವು ಹೋಗುವುದಕ್ಕೆ ಬಿಟ್ಟರೆ ತಾನೆ, ಶೂನ್ಯವೇಳೆಯಲ್ಲೂ ಬಿಡುವುದಿಲ್ಲ, ಬೆಳಿಗ್ಗೆ ಹೊತ್ತು ಬಿಡುವುದಿಲ್ಲ, ಸಾಯಂಕಾಲವೂ ಬಿಡುವುದಿಲ್ಲ.....

(೫) ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಕ್ರೀಡಾ ಚಟುವಟಿಕೆ.

+ ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಸನ್ಮಾನ್ಯ ಸಭಾಧ್ಯಕ್ಷರೆ, ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಕ್ರೀಡಾಚಟುವಟಿಕೆಗಳಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಕರು ಪ್ರಚೋದನೆ ನೀಡಬೇಕಾಗಿದೆ. ರಾಜ್ಯ ಮಟ್ಟದಲ್ಲಿ ಕರ್ನಾಟಕರಾಜ್ಯದ ದೈಹಿಕ ಶಿಕ್ಷಣ ಸಂಘದವರು ಕಳೆದ 10 ವರ್ಷಗಳಿಂದ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ವಿನಂತಿಸಿದರೂ ಕೂಡ ತಮ್ಮ ಬೇಡಿಕೆ ಈಡೇರಲಿಲ್ಲ ಎಂದು ಹೇಳುವಂಥ ಮಾತನ್ನು ಪ್ರಸ್ತಾಪಿಸಿದ್ದಾರೆ.

ಅವರ ಬೇಡಿಕೆಯೇನು ಅಂತಹ ದೊಡ್ಡ ವಿಚಾರ ಅಲ್ಲ, ಅದನ್ನು ಬಹಳ ಸೂಕ್ಷ್ಮವಾಗಿ ನಮ್ಮ ಮಾನ್ಯ ಸಚಿವರು ಮಾಡಬಹುದು. ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕರನ್ನು ಸಹ ಶಿಕ್ಷಕರನ್ನಾಗಿ ಮಾಡಬೇಕು ಎಂದು ಹೇಳುವಂತ ಬೇಡಿಕೆ. ಈ ವೃಂದ ಮತ್ತು ನೇಮಕಾತಿ ನಿಯಮ ಏನು ಇದೆ ಅದು 1967 ರಲ್ಲಿ ರೂಪಿತವಾಗಿದೆ. ಆಮೇಲೆ ಅದನ್ನು ಬದಲಾವಣೆ ಮಾಡಿಲ್ಲ. 1974 ರ ನಂತರ ಅನೇಕ ಪದವೀಧರರು ಈ ದೈಹಿಕ ಶಿಕ್ಷಣ ಶಿಕ್ಷಕರಾಗಿ ಬಂದು ಸೇರಿಕೊಂಡಿದ್ದಾರೆ. ಆದರಿಂದಾಗಿ ಅವರು ಕೇಳುತ್ತಿರುವುದು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾಡಿ ಸಹ ಶಿಕ್ಷಕರನ್ನಾಗಿ ಮಾಡಿ ಎನ್ನುವಂಥ ಮಾತನ್ನು ಕೇಳುತ್ತಿದ್ದಾರೆ. ಅಷ್ಟೇ ಅಲ್ಲದೆ 15 ವರ್ಷಗಳ ಸೇವೆ ಸಲ್ಲಿಸಿದ ಗ್ರೇಡ್-(2) ದೈಹಿಕ ಶಿಕ್ಷಕರನ್ನು ಗ್ರೇಡ್-(1) ಕ್ಕೆ ಭರ್ತಿ ಮಾಡಬೇಕೆಂದು ಕೇಳುತ್ತಿದ್ದಾರೆ. ಈಗಾಗಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ, ಶಿಕ್ಷಣಾಧಿಕಾರಿಯನ್ನೆ ಕ್ರೀಡಾಧಿಕಾರಿಯನ್ನಾಗಿ ನೇಮಿಸುವುದರ ಬದಲಿಗೆ ದೈಹಿಕ ಶಿಕ್ಷಕರನ್ನೇ ನೀವು ಕ್ರೀಡಾಧಿಕಾರಿಗಳನ್ನಾಗಿ ಮಾಡಿದರೆ ಆ ಮೂಲಕ ಈ ಕ್ರೀಡಾಚಟುವಟಿಕೆಗಳನ್ನು ಹೆಚ್ಚಿಗೆ ಮಾಡಲಿಕ್ಕೆ ಆಗುತ್ತದೆ ಎಂದು ಹೇಳುವಂಥ ಬೇಡಿಕೆ ಇದೆ. ಮತ್ತು ಅದರಲ್ಲೂ ಪದವಿಪೂರ್ವ ಕಾಲೇಜಿನಲ್ಲಿ ದೈಹಿಕ ಶಿಕ್ಷಣ ಹುದ್ದೆಯನ್ನು ಉಪನ್ಯಾಸಕರ ಸಮನಾಗಿ ಮಾಡಬೇಕು ಎನ್ನುವಂಥ ಅವರ ಬೇಡಿಕೆ ಏನು ಇದೆ ಇವೆಲ್ಲವನ್ನೂ ಅವರು ಮುಂದಿಟ್ಟುಕೊಂಡು ತಕ್ಷಣದಿಂದ ತಮ್ಮ ಈ ಬೇಡಿಕೆ ಏನು ಇದೆ ಇವೆಲ್ಲವನ್ನೂ ಅವರು ಮುಂದಿಟ್ಟುಕೊಂಡು ತಕ್ಷಣದಿಂದ ತಮ್ಮ ಈ ಬೇಡಿಕೆ ಈಡೇರದಿದ್ದರೆ ನಾವು ಎಲ್ಲಾ ಕ್ರೀಡಾಕೂಟಗಳು ಮತ್ತು ರಾಷ್ಟ್ರೀಯ ಹಬ್ಬಗಳಲ್ಲಿ ನಡೆಯತಕ್ಕಂಥ ದೈಹಿಕ ಶಿಕ್ಷಣ ಪ್ರದರ್ಶನ ಚಟುವಟಿಕೆಗಳನ್ನು ಬಹಿಷ್ಕರಿಸುವಂಥ ತೀರ್ಮಾನವನ್ನು ಕೈಗೊಂಡಿದ್ದಾರೆ. ಮತ್ತು ಆಗಸ್ಟ್ 15 ರ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕೂಡ ಈ ದೈಹಿಕ ಶಿಕ್ಷಕರು ಮಕ್ಕಳಿಂದ ಅನೇಕ ಕ್ರೀಡಾ ಚಟುವಟಿಕೆ ಗಳನ್ನು ಪ್ರದರ್ಶನ ಮಾಡುವುದನ್ನು ಆ ದಿವಸ ನಾವು ಮಾಡುವುದಿಲ್ಲ ಎನ್ನುವಂಥ ವಿಚಾರವನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ನಾನು ಕೇಳುವಂಥದ್ದು ಇಷ್ಟೆ. ಮಾನ್ಯ ಸಚಿವರು ದಯವಿಟ್ಟು ಈ ದೈಹಿಕ ಶಿಕ್ಷಣ ಶಿಕ್ಷಕರ ಏನು ಬೇಡಿಕೆಗಳು ಕಳೆದ ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವಂಥದ್ದು ಇದೆ ಇದನ್ನು ತಾವು ಈಡೇರಿಸಬೇಕು, ಇದರ ಬಗ್ಗೆ ಅನುಷ್ಠಾನಕ್ಕೆ ತರುವಲ್ಲಿ ನೀವು ಪ್ರಯತ್ನ ಮಾಡಬೇಕು. ಮತ್ತೆ ಈ ಶಿಕ್ಷಕರ ಸಂಘದ ಪದಾಧಿಕಾರಿಗಳನ್ನೆಲ್ಲ ಮಾತುಕತೆಗಾಗಿ ಕರೆಯಿಸಿ ಅವರು ಏನು ಇವ್ಮೊತ್ತು ಬಹಿಷ್ಕಾರವನ್ನು ಹಾಕಿದ್ದಾರೆ, ಅದನ್ನು ಹಿಂದಕ್ಕೆ ಪಡೆಯುವಂತೆ ತಾವು ಮನವೊಲಿಸಬೇಕು ಎಂದು ಹೇಳುವಂಥ ಮಾತನ್ನು ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :- ಮಾನ್ಯ ಸಭಾಧ್ಯಕ್ಷರೇ, ಶೃಂಗೇರಿಯಲ್ಲಿ ಭರವಸೆಯನ್ನು ಕೊಟ್ಟಿದ್ದೆ ಎಂದು ಸ್ನೇಹಿತರು ಹೇಳಿದರು, ಬಹುಶಃ ಅವರೂ ಇರಲಿಲ್ಲ ಎಂದು ಕಾಣುತ್ತದೆ ಗೊತ್ತಿಲ್ಲ. ಸಾಮಾನ್ಯವಾಗಿ ನಾನು ಭರವಸೆಯನ್ನು ಕೊಡತಕ್ಕಂಥ ಅಭ್ಯಾಸವನ್ನು ನನ್ನ ಜೀವನದಲ್ಲಿಯೇ ಮಾಡಿಲ್ಲ. ಅಧಿಕಾರಿಗಳ ಜೊತೆಯಲ್ಲಿ ಮತ್ತು ಆರ್ಥಿಕ ಇಲಾಖೆಯವರನ್ನು ಕರೆಯಿಸಿ, ಹಣಕಾಸಿನ ಸಚಿವರನ್ನು ಕರೆಯಿಸಿ ಕುಳಿತುಕೊಂಡು ಇದರಲ್ಲಿ ಏನಾಗುತ್ತದೆ ಎಂಬುದರ ಬಗ್ಗೆ ಯೋಚನೆಯನ್ನು ಮಾಡದೆಯೇ ನಾನು ಆಶ್ವಾಸನೆಯನ್ನು ಕೊಡತಕ್ಕಂಥ ಅಭ್ಯಾಸ

ನನಗಿಲ್ಲ. ಸ್ನೇಹಿತರು ಸಾಮಾನ್ಯವಾಗಿ ಅವರವರಿಗೆ ತೊಂದರೆಯಾದಾಗ ಬಂದು ಹೇಳುತ್ತಾರೆ ನೀವು ಹೇಳಿದ್ದರಲ್ಲ ವಿಶೇಷ ಏನಿಲ್ಲ. ಇದರ ಬಗ್ಗೆ ನಾವು ಬಹಳ ಚಿಂತನೆಯನ್ನು ಮಾಡಿದ್ದೇವೆ, ಅನೇಕ ಸಾರಿ ಮೀಟಿಂಗ್‌ಗಳಿಗೆ ಹೋದಲ್ಲೆಲ್ಲಾ ಅವರು ರೆಪ್ರೆಸೆಂಟೇಷನ್ ಕೊಡುತ್ತಾರೆ. ಅವರ ಸಮಸ್ಯೆಗಳು ಏನು ಎಂದು ಹೇಳಿ ತಿಳಿದು ಕೊಳ್ಳತಕ್ಕಂಥ ಅವಕಾಶ ಅವರು ಕಲ್ಪಿಸಿಕೊಟ್ಟಿರತಕ್ಕಂಥ ಸಂದರ್ಭದಲ್ಲಿ ನಾನು ಪ್ರಯತ್ನ ಪಟ್ಟಿದ್ದೇನೆ. ಹೆಚ್ಚಿಗೆ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಏನು ಮಾಡಿದ್ದೇವೆ, ಏನು ಮಾಡುತ್ತೇವೆ ಎನ್ನುವ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ ಅಧ್ಯಕ್ಷರೆ, ಈ ಬಗ್ಗೆ ಈಗಾಗಲೇ ಅವರನ್ನೂ ಕರೆಯಿಸಿ, ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳನ್ನು ಕರೆಯಿಸಿ ಅನೇಕಸಾರಿ ನಾವು ಚರ್ಚೆ ಮಾಡಿದ್ದೇವೆ. ಹೆಚ್ಚು ಆರ್ಥಿಕ ಹೊರೆ ಬೀಳುವುದರಿಂದ ಆರ್ಥಿಕ ಇಲಾಖೆ ಹೆಚ್ಚಿನ ಬೇಡಿಕೆಗೆ ಒಪ್ಪಿಕೊಳ್ಳುವುದಿಲ್ಲ. ಹೆಚ್ಚು ಖರ್ಚು ಬೀಳುತ್ತದೆ ಆದ್ದರಿಂದ ಸಾಧ್ಯವಿಲ್ಲ ಎಂದು ಹೇಳಿ ಆರ್ಥಿಕ ಇಲಾಖೆಯವರು ಹೇಳುತ್ತಾ ಇದ್ದು ದರಿಂದ ಇದುವರೆಗೂ ಕಾರ್ಯಗತ ಮಾಡುವುದಕ್ಕೆ ಆಗಿಲ್ಲ. ಆದರೂ ಈ ಅಧಿವೇಶನ ಮುಗಿಯುವುದರೊಳಗೆ ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುತ್ತಿರತಕ್ಕಂಥ ಅವಕಾಶವನ್ನು ನಾನು ಮಾಡಿಕೊಡುತ್ತೇನೆ.

(ಈ) ಪುತ್ತೂರು ತಾಲ್ಲೂಕಿನ ಇಂಡಿಯನ್ ಪ್ಲೈವುಡ್ ಕಂಪನಿ ಮತ್ತು ದಾಂಡೇಲಿಯ ಪ್ಲೈವುಡ್ ಕಂಪನಿಯಲ್ಲಿ ಕುಡಿಯುವ ಕಾರ್ಮಿಕರಿಗೆ ಬೋನಸ್.

ಶ್ರೀ ಎಸ್. ಅಂಗಾರ (ಸುಳ್ಯ) :- ಸನ್ಮಾನ್ಯ ಸಭಾಧ್ಯಕ್ಷರೆ, ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಬಿಳಿಎಲೆ ಗ್ರಾಮದ ನೆಟ್ಟಳದಲ್ಲಿರುವಂಥ ಇಂಡಿಯನ್ ಪ್ಲೈವುಡ್ ಕಂಪನಿ ಮತ್ತು ದಾಂಡೇಲಿಯ ಪ್ಲೈವುಡ್ ಕಂಪನಿಯಲ್ಲಿ ದುಡಿಯುತ್ತಿರುವ ನೂರಾರು ಕಾರ್ಮಿಕರಿಗೆ ಕಳೆದ 4-5 ತಿಂಗಳಿನಿಂದ ಕಾನೂನು ರೀತಿಯ ಯಾವುದೇ ಸಂಬಳ ಪಾವತಿಯಾಗದಿದ್ದು ಎಲ್ಲಾ ಕಾರ್ಮಿಕ ಕುಟುಂಬಗಳಿಗೆ ಸಿಗಬೇಕಾದಂಥ ಬೋನಸ್ ಕೂಡ 4-5 ವರ್ಷಗಳಿಂದ ಸಿಗದೇ ಅತೀವ ತೊಂದರೆ ಯಿಂದ ಬಳಲುತ್ತಿದ್ದು, ಮಕ್ಕಳ ವಿದ್ಯಾಭ್ಯಾಸವೂಕೂಡ ಸ್ಥಗಿತಗೊಂಡಿರುತ್ತದೆ. ಅಲ್ಲದೆ ದಾಂಡೇಲಿಯಲ್ಲಿ ಒಬ್ಬ ಕಾರ್ಮಿಕ ಈಗಾಗಲೇ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದು, ನೆಟ್ಟಳದಲ್ಲೂ ಒಬ್ಬ ಕಾರ್ಮಿಕ ಆತ್ಮಹತ್ಯೆಗೆ ಪ್ರಯತ್ನ ಪಟ್ಟಿರುತ್ತಾನೆ. ಕಾರ್ಮಿಕ ಇಲಾಖೆ ಹಾಗೂ ಸರ್ಕಾರಕ್ಕೆ ಈ ಬಗ್ಗೆ ಬರೆದುಕೊಂಡಿದ್ದರೂ ಸಹಿತ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ತಕ್ಷಣ ಈ ಬಗ್ಗೆ ಗಮನಹರಿಸಿ ಕಾರ್ಮಿಕರ ವೇತನ ಮತ್ತು ಬೋನಸ್ಸನ್ನು ನೀಡುವಂತೆ ಕೂಡಲೇ ಸರ್ಕಾರ ಆದೇಶ ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ವಿ. ಸದಾನಂದ ಗೌಡ (ಪುತ್ತೂರು) :- ಅಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ವಿಚಾರ, ಪುತ್ತೂರು ತಾಲ್ಲೂಕಿನಲ್ಲಿ ನಡೆಯುತ್ತಾ ಇರತಕ್ಕಂಥ ಪ್ರೈವೇಟ್ ಫ್ಯಾಕ್ಟರಿಯಲ್ಲಿ ಸುಮಾರು ಜನ ಕಾರ್ಮಿಕರು ಅಲ್ಲಿ ಕೆಲಸ ಮಾಡುತ್ತಾರೆ ಅದು